# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 387 (704) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ. ನಾಗರಾಜು (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | ದಿನಾಂಕ: 23.12.2022 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಹಾಗೂ ಇತರೆ ಸಂಸ್ಥೆಗಳಲ್ಲಿ ಕಾರ್ಮಿಕರು ವೇತನ ಪರಿಷ್ಕರಣೆ ಮತ್ತು ಇನ್ನಿತರ ಬೇಡಿಕೆಗಳ ಈಡೇರಿಕೆಗೆ ಮುಷ್ಕರಗಳನ್ನು ನಡೆಸಿರುವುದು ನಿಜವಲ್ಲವೆ; | ಹೌದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 04 ನಿಗಮದ ಕಾರ್ಮಿಕರು ವೇತನ ಪರಿಷ್ಕರಣೆ ಮತ್ತು ಇನ್ನಿತರ ಬೇಡಿಕೆಗಳ ಕುರಿತಂತೆ ದಿನಾಂಕ: 06.04.2021ರ ಅಪರಾಹ್ನದಿಂದ ಮುಷ್ಕರ ನಡೆಸಿರುತ್ತಾರೆ.<br><br>ನಾಲ್ಕೂ ಸಾರಿಗೆ ಸಂಸ್ಥೆಗಳ ನೌಕರರು ನಡೆಸಿದ ಮುಷ್ಕರದಿಂದಾಗಿ ಅಮಾನತ್ತುಗೊಳಿಸಲಾಗಿದ್ದ ಎಲ್ಲಾ ನೌಕರರನ್ನು ಅಮಾನತ್ತಿನಿಂದ ತೆರವುಗೊಳಿಸಿ, ಪುನಃ ಸೇವೆಯ ಮೇಲೆ ನಿಯೋಜಿಸಲಾಗಿದೆ. |
| ಆ) | ಮುಷ್ಕರದಲ್ಲಿ ಪಾಲ್ಗೊಂಡ ಹಲವಾರು ನೌಕರರನ್ನು ಆಯಾ ಸಂಘ ಸಂಸ್ಥೆಗಳು ಕಠೋರ ಶಿಸ್ತಿನ ಕ್ರಮ ಕೈಗೊಂಡಿರುವುದರಿಂದ ನೌಕರರು ಆರ್ಥಿಕವಾಗಿ ತೀವ್ರ ಸಂಕಷ್ಟಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. ಮುಷ್ಕರದಲ್ಲಿ ಪಾಲ್ಗೊಂಡತಹ ಹಲವು ನೌಕರರುಗಳನ್ನು ಸಾರಿಗೆ ಸಂಸ್ಥೆಯು ವಜಾ / ಅಮಾನತ್ತುಗೊಳಿಸಿದ್ದು, ವಜಾ/ ಅಮಾನತ್ತುಗೊಂಡತಹ ನೌಕರರು ಸಂಬಂಧಪಟ್ಟ ಇಲಾಖಾ ವ್ಯಾಪ್ತಿಯ ಕಾರ್ಮಿಕ ಅಧಿಕಾರಿಗಳ ಮುಂದೆ ವಿವಾದವನ್ನು ಎತ್ತಿರುತ್ತಾರೆ. ಅಂತಹ ವಿವಾದಗಳಲ್ಲಿ ಸಂಧಾನಾಧಿಕಾರಿಗಳು ಸಂಸ್ಥೆಯ ಅಧಿಕಾರಿಗಳನ್ನು ಹಾಗೂ ಕಾರ್ಮಿಕರನ್ನು ಸಂಧಾನಕ್ಕೆ ಒಳಪಡಿಸಲಾಗಿದ್ದು, ಉಭಯ ಪಕ್ಷದವರ ನಡುವೆ ಒಮ್ಮತ ಏರ್ಪಡದ ಕಾರಣ ವಿವಾದಗಳನ್ನು ವಿಫಲತೆಯಲ್ಲಿ ಮುಕ್ತಾಯಗೊಳಿಸಿ ವಿಫಲತಾ ವರದಿಯನ್ನು ಸಲ್ಲಿಸಿರುತ್ತಾರೆ. ಇಂತಹ ವಿಫಲತಾ ವರದಿಗಳನ್ನು ಕೈಗಾರಿಕಾ ವಿವಾದಗಳ ಕಾಯ್ದೆ 1947ರ ಕಲಂ12(4) ರನ್ವಯ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರವು ವಿವಾದವನ್ನು ಸಂಬಂಧಪಟ್ಟ ಕಾರ್ಮಿಕ ನ್ಯಾಯಾಲಯಕ್ಕೆ ನ್ಯಾಯಾಧೀಕರಣಕ್ಕೆ ಶಿಫಾರಸ್ಸು ಮಾಡಿರುತ್ತದೆ. (ಅನುಬಂಧ-1 ಮತ್ತು 2). |
| ಇ) | ಸಾರಿಗೆ ಸಂಸ್ಥೆಗಳಲ್ಲಿ ದಿನಾಂಕ:07.04.2021 ರಿಂದ 21.04.20221 ರವರೆಗೆ ವೇತನ ಪರಿಷ್ಕರಣೆಗಾಗಿ ನಡೆದ ಮುಷ್ಕರದಲ್ಲಿ ಪಾಲ್ಗೊಂಡ ಹಲವು ನೌಕರರನ್ನು ವಜಾಗೊಳಿಸಿ, ಕೆಲವರನ್ನು ಅಮಾನತ್ತು ಗೊಳಿಸಿ ಹಾಗೂ ಕೆಲವರ ಡ್ಯೂಟಿ ಸ್ವಾಪ್ ಮಾಡಲಾಗಿದ್ದ, ಕಾರಣ ಈ ಕಾರ್ಮಿಕರ ಮತ್ತು ಅವರ ಕುಟುಂಬದವರಿಗೆ ತೊಂದರೆಯಾಗಿದ್ದರೂ ಬವಣೆ ಬಗ್ಗೆ ಕೈಗೊಂಡ ಕ್ರಮವೇನು; | |

| | | |
|---|---|---|
| ಈ) | ಸುಮಾರು ಒಂದೂವರೆ ವರ್ಷಗಳು ಕಳೆದರು ಹಲವು ಕಾರಣಗಳಿಂದ (ನ್ಯಾಯಾಲಯದಲ್ಲಿರುವ ಮೊಕದ್ದಮೆಗಳು ಸೇರಿ) ಒಂದು ಪರಿಹಾರಕ್ಕೆ ಬರಲು ಸಾದ್ಯವಾಗಿಲ್ಲದಿರುವುದು ನಿಜವಲ್ಲವೆ; ಕಾರ್ಮಿಕರಾದವರು ಮಾಡಿರುವ ಅಂತ ಘೋರ ಅಪರಾಧವೇನು; ಈ ನಿಟ್ಟಿನಲ್ಲಿ ಕಾರ್ಮಿಕ ಇಲಾಖೆ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರವಾದ ವರದಿಯನ್ನು ನೀಡುವುದು) | **<u>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:</u>**<br>ಮುಷ್ಕರದಲ್ಲಿ ಪಾಲ್ಗೊಂಡ 324 ತರಬೇತಿ ನೌಕರರನ್ನು ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾಗಿದ್ದು, ಅವರುಗಳ ಪೈಕಿ 276 ನೌಕರರು ಮೇಲ್ಮನವಿಯನ್ನು ಸಲ್ಲಿಸಿದ್ದು, 266 ನೌಕರರನ್ನು ಪುನರ್ ನೇಮಕಗೊಳಿಸಲಾಗಿದೆ. (ದಯಾಯಾಚನಾ ಮನವಿ ಮೂಲಕ 152 ಮತ್ತು ಲೋಕ ಅದಾಲತ್ ಮೂಲಕ 114) ಉಳಿದ 10 ನೌಕರರ ಮೇಲ್ಮನವಿಯನ್ನು ತಿರಸ್ಕರಿಸಿದ್ದು, ಸದರಿ ತರಬೇತಿ ನೌಕರರು ಯಾವುದೇ ರೀತಿಯ ಪುನರ್ ಪರಿಶೀಲನಾ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ. ಉಳಿದ 48 ನೌಕರರು ಯಾವುದೇ ಮೇಲ್ಮನವಿಗಳನ್ನು ಸಲ್ಲಿಸದೇ ಇರುವುದರಿಂದ ಅಂತಹ ನೌಕರರುಗಳನ್ನು ಪುನರ್ ನೇಮಕ ಮಾಡಿರುವುದಿಲ್ಲ.<br><br>ಮುಷ್ಕರದ ಕಾರಣದಿಂದ ವಜಾಗೊಳಿಸಿರುವುದಿಲ್ಲ. ಮುಷ್ಕರದ ಅವಧಿಯಲ್ಲಿ ಅನ್ಯ ಕಾರಣಗಳ ಮೇಲೆ ದಾಖಲಾಗಿದ್ದ ಶಿಸ್ತು ಪ್ರಕರಣಗಳಲ್ಲಿ ಒಟ್ಟು 74 ಸಿಬ್ಬಂದಿಗಳನ್ನು ವಜಾಗೊಳಿಸಿದ್ದು, ವಜಾಗೊಂಡ ಸಿಬ್ಬಂದಿಗಳು ವಜಾ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಪ್ರಾಧಿಕಾರಸ್ಥರಿಗೆ/ಸ್ವಯಂ ಪರಿಶೀಲನಾ ಪ್ರಾಧಿಕಾರಸ್ಥರಿಗೆ ಮೇಲ್ಮನವಿ/ಅರ್ಜಿಗಳನ್ನು ಸಲ್ಲಿಸಿದ ಪ್ರಕರಣಗಳಲ್ಲಿ ನಿಯಮಾವಳಿಗಳನ್ವಯ ಮತ್ತು ಪ್ರಕರಣಗಳ ಅರ್ಹತೆಯ ಆಧಾರದ ಮೇಲೆ (on merits of the case) ಅರ್ಹ ಪ್ರಕರಣಗಳಲ್ಲಿ ಈಗಾಗಲೇ 11 ಸಿಬ್ಬಂದಿಗಳನ್ನು ಪುನರ್ ನೇಮಕ ಮಾಡಲಾಗಿದೆ<br><br>**<u>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:</u>**<br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ(ರಿ), ಗಾಂಧಿನಗರ, ಬೆಂಗಳೂರು ರವರು ದಿನಾಂಕ:06.04.2021 ರಿಂದ 21.04.2021 ರವರೆಗೆ ಹಮ್ಮಿಕೊಂಡಿದ್ದ ಮುಷ್ಕರದ ಹಿನ್ನೆಲೆಯಲ್ಲಿ ಒಟ್ಟು 1354 ನೌಕರರುಗಳನ್ನು ಸಂಸ್ಥೆಯ ಸೇವೆಯಿಂದ ವಜಾಗೊಳಿಸಲಾಗಿದೆ ಹಾಗೂ ಉಳಿದ ನೌಕರರುಗಳಿಗೆ ಕರ್ನಾಟಕ ರಾಜ್ಯ ರಸ್ತೆ ನಿಗಮದ (ನಡತೆ & ಶಿಸ್ತು) ನಿಯಮಾವಳಿ 1971 ರನ್ವಯ ಶಿಕ್ಷೆಗಳನ್ನು ವಿಧಿಸಲಾಗಿದೆ. |

| | | |
|---|---|---|
| | | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಮುಷ್ಕರದ ಸಮಯದಲ್ಲಿ ಯಾವುದೇ ನೌಕರರನ್ನು ಕಾರ್ಯಸ್ಥಾನದಿಂದ ವರ್ಗಾವಣೆ ಮಾಡಿರುವುದಿಲ್ಲ.<br><br>ಸಂಸ್ಥೆಯು ಮುಷ್ಕರದ ಸಮಯದಲ್ಲಿ ವಜಾಗೊಂಡ ನೌಕರರುಗಳಿಗೆ ಲೋಕ್-ಅದಾಲತ್ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶ ಕಲ್ಪಿಸಿದೆ.<br><br>ಮುಷ್ಕರದ ಸಮಯದಲ್ಲಿ ವಜಾಗೊಳಿಸಿರುವ ನೌಕರರನ್ನು, ಶಿಕ್ಷೆ ನೀಡಿರುವುದನ್ನು ಹಾಗೂ ಪೊಲೀಸ್ ಪ್ರಕರಣಗಳನ್ನು ರದ್ದುಪಡಿಸುವ ಪ್ರಸ್ತಾವನೆ ಸಂಸ್ಥೆಯ ಮುಂದಿರುವುದಿಲ್ಲ.<br><br>**<u>ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ</u>**<br><br>ವಾ.ಕ.ರ.ಸಾ.ಸಂಸ್ಥೆಗೆ ಸಂಬಂಧಿಸಿದಂತೆ ಮುಷ್ಕರದ ಅವಧಿಯಲ್ಲಿ ಅನಧಿಕೃತ ಗೈರು ಹಾಜರಾಗಿ ಮುಷ್ಕರದಲ್ಲಿ ಭಾಗವಹಿಸಿ ಸಂಸ್ಥೆಯ ನೌಕರನಲ್ಲದ ರೀತಿಯಲ್ಲಿ ವರ್ತಿಸಿ ತರಬೇತಿ ಹಾಗೂ ಪರೀಕ್ಷಾರ್ಥ ಸೇವೆಯ ಮೇಲೆ ನಿಯೋಜಿಸಿದ ಆದೇಶ ಉಲ್ಲಂಘನೆ ಮತ್ತು ಸಂಸ್ಥೆಯ ಘನತೆಗೆ ಧಕ್ಕೆ ಉಂಟು ಮಾಡಿರುವ ಹಿನ್ನೆಲೆಯಲ್ಲಿ, ಸಂಸ್ಥೆಯಲ್ಲಿ ಒಟ್ಟು 336 ಸಿಬ್ಬಂದಿಗಳನ್ನು ವಜಾ, ಸೇವೆಯಿಂದ ಬಿಡುಗಡೆ ಹಾಗೂ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಮುಂದುವರೆದಂತೆ, ಈ ರೀತಿಯಲ್ಲಿ ವಜಾ, ಸೇವೆಯಿಂದ ಬಿಡುಗಡೆ ಹಾಗೂ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾದ ಸಿಬ್ಬಂದಿಗಳಲ್ಲಿ 308 ಸಿಬ್ಬಂದಿಗಳು ಮೇಲ್ಮನವಿ ಸಲ್ಲಿಸಿದ್ದು, ಇದರಲ್ಲಿ 290 ಮೇಲ್ಮನವಿ ಪ್ರಕರಣಗಳಲ್ಲಿ ನಿಯಮಾವಳಿಗಳನ್ವಯ ಮತ್ತು ಪ್ರಕರಣದ ಅರ್ಹತೆಯ ಆಧಾರದ ಮೇಲೆ (on merits of the case) ಈಗಾಗಲೇ ಸದರಿ ಸಿಬ್ಬಂದಿಗಳನ್ನು ಸೇವೆಯಲ್ಲಿ ಮರುನೇಮಕಗೊಳಿಸಲಾಗಿದೆ. ಪ್ರತಿಭಟನೆಯಲ್ಲಿ ಪಾಲ್ಗೊಂಡು, ಕರ್ತವ್ಯ ನಿರತ ಚಾಲಕನ ಸಾವಿಗೆ ಕಾರಣರಾಗಿರುವ ಬಾಗಲಕೋಟೆ ವಿಭಾಗದ ಒಟ್ಟು 07 ಸಿಬ್ಬಂದಿಗಳನ್ನು ಹಾಗೂ ಅನ್ಯ ಕಾರಣಗಳ ಈ ಹಿಂದಿನ ಪ್ರಕರಣಗಳಲ್ಲಿ ವಿಚಾರಣೆ ಕೈಗೊಂಡು ವಜಾಗೊಳಿಸಿದ ಸಿಬ್ಬಂದಿಗಳಿಗೆ ಸಂಬಂಧಿಸಿದ ಮೇಲ್ಮನವಿಗಳನ್ನು ಪ್ರಕರಣದ ಗಂಭೀರತೆಯನುಸಾರ ಪರಿಗಣಿಸಿರುವುದಿಲ್ಲ. |

ಮುಷ್ಕರದಲ್ಲಿ ಪಾಲ್ಗೊಂಡ 04 ಆಡಳಿತ ಸಿಬ್ಬಂದಿ ಮತ್ತು 365 ಚಾಲನಾ ಸಿಬ್ಬಂದಿಗಳನ್ನು ವರ್ಗಾವಣೆ ಮಾಡಲಾಗಿರುತ್ತದೆ. ನಂತರ 04 ಆಡಳಿತ ಸಿಬ್ಬಂದಿಗಳ ಮತ್ತು 361 ಚಾಲನಾ ಸಿಬ್ಬಂದಿಗಳ ವರ್ಗಾವಣೆಯನ್ನು ರದ್ದುಪಡಿಸಿ ಅವರ ಮೂಲ ವಿಭಾಗಗಳಿಗೆ ನಿಯೋಜಿಸಲಾಗಿರುತ್ತದೆ. ಇನ್ನುಳಿದ 04 ಚಾಲನಾ ಸಿಬ್ಬಂದಿಗಳ ಪೈಕಿ 03 ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ, ಹಾಗೂ 01 ಸಿಬ್ಬಂದಿ ಬೇರೆ ಅಪರಾಧ ಪ್ರಕರಣದ ಮೇಲೆ ಸೇವೆಯಿಂದ ವಜಾ ಆಗಿರುತ್ತಾರೆ.

**<u>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:</u>**

ಕ.ಕ.ರ.ಸಾ.ನಿಗಮಕ್ಕೆ ಸಂಬಂಧಪಟ್ಟಂತೆ, ಮುಷ್ಕರದ ಸಂದರ್ಭದಲ್ಲಿ ಅನ್ಯ ಕಾರಣಗಳ ಮೇಲೆ 81 ಖಾಯಂ/ ತರಬೇತಿ ನೌಕರರನ್ನು ಸೇವೆಯಿಂದ ವಜಾ/ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಅವರುಗಳ ಪೈಕಿ 13 ಜನ ನೌಕರರನ್ನು ಮೇಲ್ಮನವಿ ಪ್ರಾಧಿಕಾರಿಗಳು ಪರಿಗಣಿಸಿ, ಸೇವೆಗೆ ಮರುನೇಮಕ ಮಾಡಲಾಗಿರುತ್ತದೆ. 47 ಜನ ನೌಕರರ ಮನವಿಯನ್ನು ತಿರಸ್ಕರಿಸಲಾಗಿದೆ. 21 ಜನ ನೌಕರರು ವಜಾ/ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ/ ದಯಾಯಾಚನಾ ಮನವಿಯನ್ನು ಈವರೆಗೂ ಸಲ್ಲಿಸಿರುವುದಿಲ್ಲ.

ಮುಷ್ಕರದ ಅವಧಿಯಲ್ಲಿ ಸೇವೆಯಿಂದ ವಜಾ/ ತೆಗೆದುಹಾಕಲಾದ ನೌಕರರ ಪೈಕಿ 34 ಜನ ನೌಕರರು ವಜಾ ಆದೇಶವನ್ನು ಪ್ರಶ್ನಿಸಿ ಕಾರ್ಮಿಕ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಸದರಿ ನೌಕರರನ್ನು ಲೋಕ್ ಅದಾಲತನಲ್ಲಿ ರಾಜಿ ಸಂಧಾನದ ಮೂಲಕ ಸದರಿ ನೌಕರರನ್ನು ಸೇವೆಯಲ್ಲಿ ಪುನರ್ ನೇಮಕ ಮಾಡಿಕೊಳ್ಳುವ ಕುರಿತು ಪರಿಶೀಲಿಸಲು ವ್ಯವಸ್ಥಾಪಕ ನಿರ್ದೇಶಕರವರ ಅಧ್ಯಕ್ಷತೆಯಲ್ಲಿ ಇಲಾಖಾ ಮುಖ್ಯಸ್ಥರ ಸಮಿತಿ ರಚಿಸಿದ್ದು, ಸದರಿ ಸಮಿತಿಯು ಸಭೆ ಸೇರಿ ಪರಿಶೀಲಿಸಿ ಒಟ್ಟು 20 ಪ್ರಕರಣಗಳನ್ನು ಲೋಕ್ ಅದಾಲತನಲ್ಲಿ ಈಗಾಗಲೇ ರಾಜಿ ಸಂಧಾನದ ಮೂಲಕ ಇತ್ಯರ್ಥ ಪಡಿಸಲಾಗಿರುತ್ತದೆ. ಬಾಕಿ ಇರುವ 14 ಪ್ರಕರಣಗಳು ಅತ್ಯಂತ ಗಂಭೀರ ಸ್ವರೂಪದ ಪ್ರಕರಣಗಳಾಗಿದ್ದು, ಲೋಕ್ ಅದಾಲತನಲ್ಲಿ ಇತ್ಯರ್ಥಪಡಿಸಲಾಗಿರುವುದಿಲ್ಲ.

| | | |
|---|---|---|
| | | ಪೊಲೀಸ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 32 ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 18 ವಾಹನ ಹಾನಿ/ಜಖಂಗೊಂಡ ಪ್ರಕರಣಗಳು, 07 ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಪ್ರಕರಣಗಳು, 03 ESMA ಪ್ರಕರಣಗಳು ಮತ್ತು 04 ಪ್ರಚೋದನೆ/ಸಮಾಜಿಕ ಜಾಲತಾಣ ಪ್ರಕರಣಗಳಾಗಿರುತ್ತವೆ.<br>ವರ್ಗಾವಣೆಗೆ ಸಂಬಂಧಪಟ್ಟಂತೆ ಮುಷ್ಕರದ ಅವಧಿಯಲ್ಲಿ ವರ್ಗಾವಣೆ ಗೊಳಿಸಲಾದ ಎಲ್ಲಾ ನೌಕರರನ್ನು ಅವರುಗಳ ಮೂಲ ಸ್ಥಳಕ್ಕೆ ಮರು ವರ್ಗಾವಣೆ ಮಾಡಲಾಗಿದೆ. |

**ಸಂಖ್ಯೆ: ಕಾಇ 107 ಕಾಬಾನಿ 2022**

**(ಅರಬೈಲ್ ಶಿವರಾಂ ಹೆಬ್ಬಾರ್)**
**ಕಾರ್ಮಿಕ ಸಚಿವರು**

ಅನುಬಂಧ - 1

ಕರ್ನಾಟಕ ಸರ್ಕಾರ

ಸಂಖ್ಯೆ:ಕಾಇ 174 ಐಡಿಎಂ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:09-04-2021.

ಆದೇಶ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ, ಗಾಂಧಿ ನಗರ, ಬೆಂಗಳೂರು ಹಾಗೂ ಆಡಳಿತ ವರ್ಗದವರಾದ 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು 2) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು 3) ವ್ಯವಸ್ಥಾಪಕ ನಿರ್ದೇಶಕರು, ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ, 4) ವ್ಯವಸ್ಥಾಪಕ ನಿರ್ದೇಶಕರು, ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕಲಬುರಗಿ ಇವರ ಮಧ್ಯೆ ಹಲವು ಬೇಡಿಕೆಗಳ ಉದ್ಭವಿಸಿದ ಕೈಗಾರಿಕಾ ವಿವಾದವು ಸಂಧಾನಾಧಿಕಾರಿಗಳ ಮುಂದೆ ವಿಫಲತೆಯಲ್ಲಿ ಮುಕ್ತಾಯಗೊಂಡಿದ್ದು, ಸದರಿ ವಿವಾದವನ್ನು ಕೈಗಾರಿಕಾ ವಿವಾದವೆಂದು ಅಭಿಪ್ರಾಯ ಪಟ್ಟಿರುವುದರಿಂದ ನ್ಯಾಯನಿರ್ಣಯಕ್ಕಾಗಿ ವಿವಾದವನ್ನು ಪರಿಶೀಲಿಸುವುದು ಅಗತ್ಯವೆಂದು ಕರ್ನಾಟಕ ಸರ್ಕಾರವು ಪರಿಗಣಿಸಿದೆ:

ಆದ್ದರಿಂದ ಕೈಗಾರಿಕಾ ವಿವಾದಗಳ ಅಧಿನಿಯಮ 1947 (ಕೇಂದ್ರಾಧಿನಿಯಮ 14, 1947)ರ 10ನೇ ಪ್ರಕರಣದ (1)ನೇ ಉಪ-ಪ್ರಕರಣದ(ಸಿ)(ಡಿ) ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ವಿವಾದವನ್ನು ನ್ಯಾಯ ನಿರ್ಣಯಕ್ಕಾಗಿ ಮತ್ತು ಆರು ತಿಂಗಳ ಒಳಗಾಗಿ ತೀರ್ಪನ್ನು ಒಪ್ಪಿಸಲು, ಔದ್ಯಮಿಕ ನ್ಯಾಯಾಧೀಕರಣ, ಬೆಂಗಳೂರು ಇಲ್ಲಿಗೆ ಕಳುಹಿಸಿದೆ.

ವಾದಾಂಶಗಳು

1. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ, ನಂ. 149, 5ನೇ ಕ್ರಾಸ್, ನಂದ ಹೋಟೆಲ್ ಬಿಲ್ಡಿಂಗ್, ಗಾಂಧಿ ಪಾರ್ಕ್ ಹಿಂಭಾಗ, ಗಾಂಧಿ ನಗರ, ಬೆಂಗಳೂರು-09 ಇವರು ಆಡಳಿತವರ್ಗದವರಾದ 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಶಾಂತಿ ನಗರ, ಬೆಂಗಳೂರು 2) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಶಾಂತಿ ನಗರ, ಬೆಂಗಳೂರು 3) ವ್ಯವಸ್ಥಾಪಕ ನಿರ್ದೇಶಕರು, ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ, 4) ವ್ಯವಸ್ಥಾಪಕ ನಿರ್ದೇಶಕರು, ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕಲಬುರಗಿ ಇವರು 6ನೇ ವೇತನ ಆಯೋಗದ ಶಿಫಾರಸ್ಸನ್ನು ಜಾರಿಗೊಳಿಸಬೇಕೆಂದು ಬೇಡಿಕೆಯನ್ನು ಮಂಡಿಸಿರುವುದು ನ್ಯಾಯಸಮ್ಮತವೇ?
2. ವಾದಾಂಶ (1) ರ ಬೇಡಿಕೆಯನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ, ನಂ. 149, 5ನೇ ಕ್ರಾಸ್, ನಂದ ಹೋಟೆಲ್ ಬಿಲ್ಡಿಂಗ್, ಗಾಂಧಿ ಪಾರ್ಕ್ ಹಿಂಭಾಗ, ಗಾಂಧಿ ನಗರ, ಬೆಂಗಳೂರು - 09 ಇವರಿಂದ ಪ್ರತಿನಿಧಿಸಲ್ಪಡುವ ಕಾರ್ಮಿಕರು ದಿನಾಂಕ: 06.04.2021ರ ಅಪರಾಹ್ನದಿಂದ ಮುಷ್ಕರ ಹೂಡಿರುವುದು ನ್ಯಾಯಸಮ್ಮತವೇ?

ಕಾರ್ಮಿಕ ಆಯುಕ್ತರವರ ಕಛೇರಿ ... ರಸ್ತೆ, ಬೆಂಗಳೂರು

ಅನುಬಂಧ - 2.

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 174 ಐಡಿಎಂ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು,ದಿನಾಂಕ:09.04.2021.

ಆದೇಶ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ, ಗಾಂಧಿ ನಗರ, ಬೆಂಗಳೂರು ಇವರು ದಿನಾಂಕ:18-03-2021ರಲ್ಲಿ ಕಾರ್ಮಿಕ ಆಯುಕ್ತರಿಗೆ ಒಂದು ಮನವಿ ಹಾಗೂ ಮುಷ್ಕರದ ನೋಟೀಸನ್ನು ನಮೂನೆ - "L" ನಲ್ಲಿ ಸಲ್ಲಿಸಿ, ಆಡಳಿತವರ್ಗದವರಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಅದರ ಇತರ ಅಂಗ ಸಂಸ್ಥೆಗಳು ತಮ್ಮ ಸಂಘದ ಸದಸ್ಯರಿಗೆ ಸಂಬಂಧಿಸಿದ ಬೇಡಿಕೆಗಳನ್ನು ಪ್ರಮುಖವಾಗಿ 6ನೇ ವೇತನ ಆಯೋಗದ ಶಿಫಾರಸ್ಸನ್ನು ಸಾರಿಗೆ ನೌಕರರಿಗೆ ಅಳವಡಿಸಿಕೊಳ್ಳುವ ವಿಚಾರದಲ್ಲಿ ವಿಳಂಬ ಧೋರಣೆ ಮಾಡುತ್ತಿರುವ ಕಾರಣ ದಿನಾಂಕ:07.04.2021 ರಿಂದ ಅನಿರ್ದಿಷ್ಟ ಅವಧಿಯವರೆಗೆ ಮುಷ್ಕರವನ್ನು ರಾಜ್ಯಾದ್ಯಾಂತ ನಡೆಸುವುದಾಗಿ ತಿಳಿಸಿರುತ್ತಾರೆ.

ಕಾರ್ಮಿಕ ಸಂಘ ಸಲ್ಲಿಸಿರುವ ಮುಷ್ಕರದ ನೋಟಿಸಿನ ಬಗ್ಗೆ ಕೈಗಾರಿಕಾ ವಿವಾದ ಕಾಯ್ದೆ 1947 ರ ಕಲಂ 12(1) ರಡಿಯಲ್ಲಿ ಕಾರ್ಮಿಕ ಸಂಘಟನೆ ಹಾಗೂ 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು 2) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು 3) ವ್ಯವಸ್ಥಾಪಕ ನಿರ್ದೇಶಕರು, ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ, 4) ವ್ಯವಸ್ಥಾಪಕ ನಿರ್ದೇಶಕರು, ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕಲಬುರಗಿ ಇವರ ಮಧ್ಯೆ ಉದ್ಭವಿಸಿರುವ ಕೈಗಾರಿಕಾ ವಿವಾದದ ಬಗ್ಗೆ ಸಂಧಾನ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದರೂ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ, ಗಾಂಧಿ ನಗರ, ಬೆಂಗಳೂರು ಇವರಿಂದ ಪ್ರತಿನಿಧಿಸಲ್ಪಡುವ ಕಾರ್ಮಿಕರು ದಿನಾಂಕ: 06-04-2021ರಿಂದಲೇ ಮುಷ್ಕರವನ್ನು ಹೂಡಿರುವುದಾಗಿ ಕಾರ್ಮಿಕ ಆಯುಕ್ತರು ದಿನಾಂಕ:09-04-2021ರ ಅಭಿಪ್ರಾಯ ವರದಿಯಲ್ಲಿ ತಿಳಿಸಿರುತ್ತಾರೆ.

ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ: ಕಾಇ 98 ಎಲ್‌ಡಬ್ಲ್ಯೂಎ 2020, ದಿನಾಂಕ:22-01-2021 ರಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳನ್ನು ಕೈಗಾರಿಕಾ ವಿವಾದ ಕಾಯ್ದೆ ಕಲಂ 2(n)(vi) ಅಡಿಯಲ್ಲಿ "ಸಾರ್ವಜನಿಕ ಉಪಯುಕ್ತ ಸೇವೆ" ಎಂದು ಅಧಿಸೂಚಿಸಲಾಗಿದೆ.

ಮುಷ್ಕರದಿಂದ ಸಾರ್ವಜನಿಕರಿಗೆ ಉಂಟಾಗಿರುವ ಅನಾನುಕೂಲತೆಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಕೈಗಾರಿಕಾ ವಿವಾದ ಕಾಯ್ದೆ 22(1)(d) ರಲ್ಲಿ ತಿಳಿಸಿರುವಂತೆ, ಕೈಗಾರಿಕಾ ವಿವಾದವು ಸಂಧಾನ ಪ್ರಕ್ರಿಯೆಯಲ್ಲಿ ಬಾಕಿ ಇರುವಾಗ ಕಾರ್ಮಿಕರು ಯಾವುದೇ ಮುಷ್ಕರವನ್ನು ಹೂಡಬಾರದೆಂಬ ನಿಯಮವಿರುತ್ತದೆ.

3. ನ್ಯಾಯಸಮ್ಮತವಾದಲ್ಲಿ, ... ಕಾರ್ಮಿಕ ಸಂಘದಿಂದ ಪ್ರತಿನಿಧಿಸಲ್ಪಡುವ ಕಾರ್ಮಿಕರು ಯಾವ ಪರಿಹಾರಕ್ಕೆ ಅರ್ಹರು?

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

Girija

(ಗಿರಿಜಮ್ಮ)
ಪೀಠಾಧಿಕಾರಿ-6
ಕಾರ್ಮಿಕ ಇಲಾಖೆ

ಇವರಿಗೆ,

ಅಧ್ಯಕ್ಷಾಧಿಕಾರಿಗಳು, ಔದ್ಯಮಿಕ ನ್ಯಾಯಾಧೀಕರಣ, ಬೆಂಗಳೂರು. ನ್ಯಾಯ ದೇಗುಲ, 66:9 ವಾರ್ಡ್ ನಂ.48, ಹೆಚ್.ಸಿದ್ದಯ್ಯ ರಸ್ತೆ (ಡಬ್ಬಲ್ ರಸ್ತೆ) ಮತ್ತು ಸಿದ್ದಯ್ಯ ರಸ್ತೆಯ ಜಂಕ್ಷನ್ ಹತ್ತಿರ, ಬೆಂಗಳೂರು.

ಪ್ರತಿಗಳು:-

1)ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.

2)ಕಾರ್ಮಿಕ ಸಂಘ:- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ, ನಂ.149, 5ನೇ ಕ್ರಾಸ್, ನಂದ ಹೋಟೆಲ್ ಬಿಲ್ಡಿಂಗ್, ಗಾಂಧಿ ಪಾರ್ಕ್ ಹಿಂಭಾಗ, ಗಾಂಧಿ ನಗರ, ಬೆಂಗಳೂರು-560009.

3)ಆಡಳಿತ ವರ್ಗ:-

- ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು
- ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು
- ವ್ಯವಸ್ಥಾಪಕ ನಿರ್ದೇಶಕರು, ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ.
- ವ್ಯವಸ್ಥಾಪಕ ನಿರ್ದೇಶಕರು, ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕಲಬುರಗಿ.

ಸಾರ್ವಜನಿಕರಿಗೆ ಉಂಟಾಗಿರುವ ಅನಾನುಕೂಲತೆ ಹಾಗೂ ಕೈಗಾರಿಕಾ ವಿವಾದ ಕಾಯ್ದೆಯ ಪ್ರಾವಧಾನಗಳಿಗೆ ವಿರುದ್ಧವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ, ಗಾಂಧಿ ನಗರ, ಬೆಂಗಳೂರು ಇವರಿಂದ ಪ್ರತಿನಿಧಿಸಲ್ಪಡುವ ಕಾರ್ಮಿಕರು ದಿನಾಂಕ:06-04-2021ರ ಅಪರಾಹ್ನದಿಂದ ಮುಷ್ಕರ ಹೂಡಿರುವುದನ್ನು ಗಮನದಲ್ಲಿರಿಸಿ, ಕರ್ನಾಟಕ ಸರ್ಕಾರವು ಕೈಗಾರಿಕಾ ವಿವಾದ ಕಾಯ್ದೆ 1947 ರ ಕಲಂ

10(3) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ, ಗಾಂಧಿ ನಗರ, ಬೆಂಗಳೂರು ಇವರಿಂದ ಪ್ರತಿನಿಧಿಸಲ್ಪಡುವ ಕಾರ್ಮಿಕರು ದಿನಾಂಕ:06-04-2021ರಿಂದ ಹೂಡಿರುವ ಮುಷ್ಕರವನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನಿಷೇಧಿಸಿದೆ.

ಅಲ್ಲದೆ ಸದರಿ ವಿವಾದವನ್ನು ನ್ಯಾಯ ನಿರ್ಣಯಕ್ಕಾಗಿ ಔದ್ಯಮಿಕ ನ್ಯಾಯಾಧೀಕರಣ, ಬೆಂಗಳೂರು ಇಲ್ಲಿಗೆ ಆದೇಶ ಸಂಖ್ಯೆ ಕಾ 174 ಐಡಿಎಂ 2021, ದಿನಾಂಕ: 09.04.2021 ರಲ್ಲಿ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಉಪ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

ಇವರಿಗೆ,

1) ಕಾರ್ಮಿಕ ಸಂಘ:

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ, ನಂ.149, 5ನೇ ಕ್ರಾಸ್, ನಂದ ಹೋಟೆಲ್ ಬಿಲ್ಡಿಂಗ್, ಗಾಂಧಿ ಪಾರ್ಕ್ ಹಿಂಭಾಗ, ಗಾಂಧಿ ನಗರ, ಬೆಂಗಳೂರು-560009.

2) ಆಡಳಿತವರ್ಗ:

1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು.

2) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು.

3) ವ್ಯವಸ್ಥಾಪಕ ನಿರ್ದೇಶಕರು, ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಹುಬ್ಬಳ್ಳಿ.

4) ವ್ಯವಸ್ಥಾಪಕ ನಿರ್ದೇಶಕರು, ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕಲಬುರಗಿ

ಪ್ರತಿ:

1) ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
6) ಮಾನ್ಯ ಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7) ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
8) ಆಯುಕ್ತರು, ಸಾರಿಗೆ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560027.
9) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560027.
10) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು.
11) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
12) ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.